ಕರ್ನಾಟಕ ವಿಧಾನಸಭೆ

ಗುರುವಾರ 25ನೇ ಮಾರ್ಚ್ 1999ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದರು.

1) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಮಾಂಗಲ್ಯ ಭಾಗ್ಯ ಯೋಜನೆ ಅನುಷ್ಠಾನ.

163(1280) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಮಾಂಗಲ್ಯ ಭಾಗ್ಯ ಯೋಜನೆ ಯಾವಾಗನಿಂದ ಜಾರಿಗೆ ಬಂದಿದೆ.

ಆ) ಇದಕ್ಕಾಗಿ ನಿಗದಿಪಡಿಸಿದ ಹಣ ಎಷ್ಟು; ಇದುವರೆಗೆ ಖರ್ಚು ಮಾಡಿದ ಹಣ ಎಷ್ಟು; ಮತ್ತು ಫಲಾನುಭವಿಗಳು ಎಷ್ಟು;

ಇ) ಮಾಂಗಲ್ಯ ಭಾಗ್ಯ ಮಂಜೂರಾತಿ ಸಮಿತಿಗೆ ಸಂಬಂಧಿಸಿದಂತೆ ತಾಲ್ಲೂಕು ಸಮಿತಿಗಳ ರಚನೆಯಾದದ್ದು ಯಾವಾಗ ಎಲ್ಲಾ ತಾಲ್ಲೂಕುಗಳಲ್ಲೂ ರಚನೆಯಾಗಿದೆಯೇ;

ಈ) ಮಾಂಗಲ್ಯಭಾಗ್ಯ ಹಣ ಪಡೆಯುವ ಬಗ್ಗೆ ತೀರ್ಥಹಳ್ಳಿ ಮತ್ತು ಹೊಸನಗರದಲ್ಲಿ ಇದುವರೆಗೆ ಬಂದ ಅರ್ಜಿಗಳು ಒಟ್ಟು ಸಂಖ್ಯೆ ಎಷ್ಟು; ಯಾವಾಗ ಈ ಅರ್ಜಿಗಳಿಗೆ ಹಣ ಕೊಡಲಾಗುವುದು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :—

ಅ) ದಿನಾಂಕ : 12-1-1999 ರಿಂದ.

ಆ) ಈ ಉದ್ದೇಶಕ್ಕಾಗಿ ರೂ. 100.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಈವರೆವಿಗೆ 2 ಫಲಾನುಭವಿಗಳಿಗೆ ತಲಾ ರೂ. 5000-00 ರಂತೆ ರೂ. 10,000ಗಳ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

ಇ) ಸರ್ಕಾರದ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಲು ಆದ್ದೇಶಿಸಿದ್ದು, ಫಲಾನುಭವಿಗಳ ಆಯ್ಕೆಗಾಗಿ ಕೆಲವು ತಾಲ್ಲೂಕುಗಳಲ್ಲಿ ಸಮಿತಿಯ ರಚನೆ ಆಗಿದ್ದು, ಉಳಿದ ತಾಲ್ಲೂಕುಗಳಲ್ಲಿ ಸಮಿತಿಯನ್ನು ರಚಿಸಲಾಗುತ್ತಿದೆ.

ಈ) ಈ ಯೋಜನೆಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನಿಂದ 2 ಹಾಗೂ ಹೊಸನಗರ ತಾಲ್ಲೂಕಿನಿಂದ 1 ಅರ್ಜಿ ಸ್ವೀಕೃತವಾಗಿದ್ದು, ಇವರಿಗೆ ನಿಯಮಾನುಸಾರ ಸಹಾಯಧನ ಮಂಜೂರು ಮಾಡಲು ಕ್ರಮ ವಹಿಸಲಾಗುವುದು.

ಅಧ್ಯಕ್ಷರು :— ನಿಮ್ಮ ಹೆಸರು ಆರಗ ಜ್ಞಾನೇಂದ್ರನೋ ಅಥವಾ ಆರಗ ಜ್ಞಾನೇಂದ್ರನೋ? ನಮ್ಮಲ್ಲಿ 'ಆ' ತೆಗೆದು ಬಿಟ್ಟಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ :— ನನ್ನ ಹೆಸರು ಆರಗ ಜ್ಞಾನೇಂದ್ರ ಸಾರ್. ಟಿ.ವಿ.ನಲ್ಲಿ ಹೆಸರು ಹೇಳುವಾಗ ಮತ್ತು ಪತ್ರಿಕೆಯವರು ಬರೆಯುವಾಗ, ಇಲ್ಲಿ ಬರೆಯುವಾಗ ಎಲ್ಲ ಆರಗ ಜ್ಞಾನೇಂದ್ರ ಎಂದು ಹೇಳಿ ಹಾಕುತ್ತಾರೆ. ಅದನ್ನು ಸ್ವಲ್ಪ ಬದಲಾವಣೆ ಮಾಡಲು ಸೂಚನೆ ಕೊಡಬೇಕು. ನನ್ನ ಹೆಸರು ಆರಗ ಜ್ಞಾನೇಂದ್ರ.

ಅಧ್ಯಕ್ಷರು :— ನಾನೂ ಹಾಗೆಯೇ ಅಂದುಕೊಂಡೆ. ಕರೆಯುವುದಕ್ಕೆ ಹಾಗೆಯೇ ಚೆನ್ನಾಗಿರುತ್ತದೆ.

ಶ್ರೀ ಆರಗ ಜ್ಞಾನೇಂದ್ರ :— ಮಾಂಗಲ್ಯ ಭಾಗ್ಯ ಯೋಜನೆ ಜಾರಿಗೆ ಬಂದಿರತಕ್ಕದ್ದು ಕಳೆದ ಬಜೆಟ್‌ನಲ್ಲಿ. 31.3.98ರ ಬಜೆಟ್‌ನಲ್ಲಿ ಸರ್ಕಾರ ಪ್ರಸ್ತಾಪ ಮಾಡಿತ್ತು. ನಾನು ರಾಜ್ಯದಲ್ಲಿ ಮಾಂಗಲ್ಯ ಭಾಗ್ಯ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ ಎಂದು ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ದಿನಾಂಕ 12.1.99 ರಿಂದ ಜಾರಿಗೆ ಬಂದಿದೆ ಎಂದು ತಿಳಿಸಿದ್ದಾರೆ. ಆಮೇಲೆ ಈ ಉದ್ದೇಶಕ್ಕೋಸ್ಕರ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ, ಎಂಬ ಪ್ರಶ್ನೆಗೆ ಅವರು ಒಂದು ಕೋಟಿ ರೂಪಾಯಿ ಹಣವನ್ನು ನಿಗದಿ ಮಾಡಿದ್ದಾರೆ. ಇದುವರೆಗೆ ಪಾವತಿ ಮಾಡಿರತಕ್ಕ ಹಣ ಎಷ್ಟು ಎಂದು ಕೇಳಿದ್ದಕ್ಕೆ ಇದುವರೆಗೆ ಎರಡು ಫಲಾನುಭವಿಗಳಿಗೆ ತಲಾ 5 ಸಾವಿರ ರೂಪಾಯಿಗಳಂತೆ ಹತ್ತು ಸಾವಿರ ರೂಪಾಯಿಗಳ ಸಹಾಯಧನವನ್ನು ಮಂಜೂರು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆ ಭಾಗ್ಯವಂತರು ಯಾರು ಎಂದು ನನಗೆ ಗೊತ್ತಾಗಲಿಲ್ಲ. ಇದು ಇಡೀ ರಾಜ್ಯದ ಪ್ರಶ್ನೆ. ಇಡೀ ರಾಜ್ಯಕ್ಕೆ ಒಂದು ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಂತಹ ಯೋಜನೆಯಲ್ಲಿ ಒಂದು ವರ್ಷದ ನಂತರ ಮಾನ್ಯ ಸಚಿವರು ಉತ್ತರ ಕೊಡುವಾಗ ಹತ್ತು ಸಾವಿರ ರೂಪಾಯಿಗಳನ್ನು ನೀಡಿದ್ದೇವೆಂದು ಹೇಳಿದ್ದಾರೆ. (ಇ) ನಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಇನ್ನೂ ತಾಲ್ಲೂಕು ಸಮಿತಿಗಳು ರಚನೆ ಆಗುತ್ತಿದೆ. ಮಾಂಗಲ್ಯ ಭಾಗ್ಯ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಇವರೊಂದು ಸಮಿತಿ ಮಾಡಬೇಕು. ಇನ್ನೂ

ಸಮಿತಿಯ ರಚನೆ ಆಗದೇ ಹಣ ಕೂಡ ಬಿಡುಗಡೆ ಆಗಿಲ್ಲ. ಶಿವಮೊಗ್ಗ ಜಿಲ್ಲಾಧಿಕಾರಿಗಳನ್ನು ನಾನು ಕೇಳಿದೆ, ಒಂದೂವರೆ ವರ್ಷ ಆಯಿತು, ಒಂದು ಪೈಸೆ ಸಹ ಬಿಡುಗಡೆ ಇದುವರೆವಿಗೂ ಆಗಿಲ್ಲ. ಈ ಯೋಜನೆ ಜಾರಿಗೆ ಬಂದು ಒಂದೂವರೆ ವರ್ಷ ಆದರೂ ಒಂದು ಪೈಸೆ ಬಿಡುಗಡೆ ಆಗಿಲ್ಲ. ಬಹುಶಃ ನಿಮ್ಮ ಸರ್ಕಾರಕ್ಕೆ ಈ ಬಜೆಟ್ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಈ ನಾಮಕರಣ ಮಾಡುವಂತಹವರು ಯಾರು? ಈ ಪದಗಳನ್ನು, ಈ ಹೆಸರುಗಳನ್ನು ಕೊಡುವಂತಹ ಪುರೋಹಿತರು ಯಾರು ಎಂದು ಹೇಳಿ.

ಅಧ್ಯಕ್ಷರು :— ತಾವು ಪ್ರಶ್ನೋತ್ತರವನ್ನು ಮರೆತೇ ಬಿಟ್ಟಿದ್ದೀರಿ. ಟಕ ಟಕ ಎಂದು ಪ್ರಶ್ನೆ ಹಾಕಬೇಕು. ನೀವು ಉಪನ್ಯಾಸ ಮಾಡಿದರೆ ಹೇಗೆ?

ಶ್ರೀ ಆರಗ ಜ್ಞಾನೇಂದ್ರ :— ಈ ರೀತಿ ಹೊಸ ಯೋಜನೆಗಳನ್ನು ಜಾರಿಗೆ ತರುತ್ತೀರಿ. ಆದರೆ ನಿಮಗೆ ಮಂಜೂರಾತಿಯನ್ನು ಫಲಾನುಭವಿಗಳಿಗೆ ಕೊಡುವಂತಹ ಇಚ್ಛಾಶಕ್ತಿ ಏಕೆ ಇಲ್ಲ? ಒಂದು ಕೋಟಿ ರೂಪಾಯಿ ಇಟ್ಟುಕೊಂಡಿದ್ದರೂ ಸಹ ಇದುವರೆಗೆ ಹಣ ಏಕೆ ಬಿಡುಗಡೆ ಆಗಲಿಲ್ಲ? ಕೇವಲ ಎರಡು ಫಲಾನುಭವಿಗಳನ್ನು ಆಯ್ಕೆ ಮಾಡಲು ಏನು ಕಾರಣ? ಫಲಾನುಭವಿಗಳ ಪಟ್ಟಿಯೇ ಬರಲಿಲ್ಲವೇ? ನನಗೆ ಗೊತ್ತಿದ್ದ ಹಾಗೆ....

ಅಧ್ಯಕ್ಷರು :— ನೀವು ನಿಮ್ಮ ಪ್ರಶ್ನೆಯನ್ನು ಓದಿಕೊಳ್ಳಿ. ನಿಮ್ಮಂತಹ ಬುದ್ಧಿವಂತರು ಭಾಷಣ ಮಾಡಿದರೆ ಹೇಗೆ? ಮಾಂಗಲ್ಯಭಾಗ್ಯ ಹಣ ಪಡೆಯುವ ಬಗ್ಗೆ ತೀರ್ಥಹಳ್ಳಿ ಮತ್ತು ಹೊಸನಗರದಲ್ಲಿ ಇದುವರೆಗೆ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು? ಯಾವಾಗ ಈ ಅರ್ಜಿಗಳಿಗೆ ಹಣ ಕೊಡಲಾಗುವುದು ಎಂದು ಕೇಳಿದ್ದೀರಿ. ಬಂದಿದ್ದು ಎರಡು ಅರ್ಜಿ, ಎರಡು ಜನರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ :— ನಾನು ಇಡೀ ರಾಜ್ಯದ ಮಾಹಿತಿಯನ್ನು ಕೇಳಿದ್ದೇನೆ. ಆಮೇಲೆ ನಾನು ನನ್ನ ತಾಲ್ಲೂಕಿನದ್ದು ಕೇಳಿದ್ದೇನೆ.

ಅಧ್ಯಕ್ಷರು :— ಎಲ್ಲಿ ಕೇಳಿದ್ದೀರಿ? ಯಾವ ಪ್ರಶ್ನೆ ಓದಿ.

ಶ್ರೀ ಆರಗ ಜ್ಞಾನೇಂದ್ರ :— ರಾಜ್ಯದಲ್ಲಿ ಮಾಂಗಲ್ಯ ಭಾಗ್ಯ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ, ಇದಕ್ಕಾಗಿ ನಿಗದಿಪಡಿಸಿದ ಹಣ ಎಷ್ಟು?

ಅಧ್ಯಕ್ಷರು :— ಇಂತಹ ತಾರೀಖಿನಿಂದ ಜಾರಿಗೆ ಬಂತು, ಇಷ್ಟು ಹಣ ಇಟ್ಟಿದ್ದೇವೆ ಎಂದು ಹೇಳಿದ್ದಾರಲ್ಲಾ. ತೀರ್ಥಹಳ್ಳಿ ಹಾಗೂ ಹೊಸನಗರದ ವಿಚಾರ ಕೇಳಿದ್ದೀರಿ, ಇಬ್ಬರು ಫಲಾನುಭವಿಗಳು ಇದ್ದಾರೆ, ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಿಮ್ಮ ಪ್ರಶ್ನೆ ಓದಿ. ನೀವು ಬುದ್ಧಿವಂತರು, ನೀವು ಪ್ರಿಪೇರ್ ಆಗಿ ಬರುವುದಿಲ್ಲ. ಪ್ರಶ್ನೆ ನೀವು ಮೊದಲು ನೋಡಿಕೊಂಡು ಬರುವುದಿಲ್ಲ. ನಿಮ್ಮ ಪ್ರಶ್ನೆ ನೋಡಿ, ಅನ್ಸರ್ ಓದಿ.

ಶ್ರೀ ಆರಗ ಜ್ಞಾನೇಂದ್ರ :— ಇಡೀ ರಾಜ್ಯಕ್ಕೆ ಎಷ್ಟು ಹಣ ನಿಗದಿ ಮಾಡಿದ್ದೀರಿ, ಎಷ್ಟು ಹಣ ಬಿಡುಗಡೆ ಇಡೀ ರಾಜ್ಯದಲ್ಲಿ ಮಾಡಿದ್ದಾರೆ ಎಂದು ಹೇಳಲಿ.

ಅಧ್ಯಕ್ಷರು :— ಇಡೀ ರಾಜ್ಯಕ್ಕೆ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ನೀವು ಕೇಳಿದ್ದೀರಾ? ಫಲಾನುಭವಿಗಳು ಇಲ್ಲದೇ ಬಿಡುಗಡೆ ಮಾಡುವುದಕ್ಕೆ ಆಗುತ್ತದಾ? ಅರ್ಜಿದಾರರು ಇರಬೇಕೋ ಬೇಡವೋ ಬಿಡುಗಡೆ ಆಗಬೇಕಾದರೆ? ನೀವು ಅದಕ್ಕೆ ಪ್ರಶ್ನೆ ಕೇಳಬೇಕಾಗಿದ್ದು ಇಷ್ಟು ಜನ ಫಲಾನುಭವಿಗಳು ಇದ್ದಾರೆ, ಜಿಲ್ಲಾವಾರು ಇಷ್ಟು ಅರ್ಜಿಗಳು ಇದ್ದಾವೆ, ಏಕೆ ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಕೇಳಿ.

ಶ್ರೀ ಆರಗ ಜ್ಞಾನೇಂದ್ರ :— ಎಷ್ಟು ಅರ್ಜಿ ಬಂದಿದೆ, ಏಕೆ ಹಣ ಬಿಡುಗಡೆ ಆಗಿಲ್ಲ?

ಅಧ್ಯಕ್ಷರು :— ನೀವು ತಯಾರಿ ಇಲ್ಲ, ಮೊದಲನೇ ಪ್ರಶ್ನೆ ಸರಿಯಾಗಿ ಹೋಮ್ ವರ್ಕ್ ಮಾಡಿಲ್ಲ ಎಂದು ನಮಗೆ ಗೊತ್ತಾಗಿ ಬಿಡುತ್ತದೆ. ಯಾರು ಹೋಮ್ ವರ್ಕ್ ಮಾಡಿದ್ದಾರೆ, ಯಾರು ಮಾಡಿಲ್ಲ ಎಂದು ಗೊತ್ತಾಗಿ ಬಿಡುತ್ತದೆ. ನಾವು ದಿವಸ ಪೇಪರ್ ವ್ಯಾಲುಯೇಷನ್ ಮಾಡುತ್ತೇವೆ, ನಮಗೆ ಗೊತ್ತಾಗುವುದಿಲ್ಲವಾ?

ಶ್ರೀ ಆರಗ ಜ್ಞಾನೇಂದ್ರ :— ನಾನು ಸರಿಯಾಗಿ ಹೋಮ್ ವರ್ಕ್ ಮಾಡೇ ಕೊಟ್ಟಿದ್ದೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಮಾನ್ಯ ಅಧ್ಯಕ್ಷರೆ, ಈ ಯೋಜನೆಯನ್ನು ಕಳೆದ ಬಜೆಟ್‌ನಲ್ಲಿ ಜಾರಿ ಗೊಳಿಸಲಾಗಿದ್ದು, ತಾಲ್ಲೂಕು ಮಟ್ಟದ ಸಮಿತಿಗಳನ್ನು ಮಾಡಲಿಕ್ಕೆ ಆದೇಶನೀಡಲಾಗಿದೆ. ಆದರೆ ಅರ್ಜಿಗಳು ಆ ಸಂದರ್ಭದಲ್ಲಿ ಬಹಳಷ್ಟು ಬರಲಿಲ್ಲ. ಈಗತಾನೇ ಅರ್ಜಿಗಳು ಬರುವುದರಿಂದ ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾದರೆ ಶಿವಮೊಗ್ಗ ಜಿಲ್ಲೆಯ ಸಾಗರ ಕ್ಷೇತ್ರದಲ್ಲಿ ಎರಡು ಅರ್ಜಿಗಳಿಗೆ ಸ್ವತಃ ಐದೈದು ಸಾವಿರ ರೂಪಾಯಿಗಳ ಚೆಕ್ ಫಲಾನುಭವಿಗಳಿಗೆ ಕೊಟ್ಟು ಬಂದಿದ್ದೇನೆ. ತಮ್ಮ ತೀರ್ಥಹಳ್ಳಿಯಿಂದ ಕೇವಲ ಎರಡು ಅರ್ಜಿ ಮಾತ್ರ ಬಂದಿದೆ. ಮಾಹಿತಿ ಇದೆ ಕೇವಲ ಎರಡು ಅರ್ಜಿ ಮಾತ್ರ ಬಂದಿದೆ. ಇದಕ್ಕೆ ಜನ ಕೂಡ ಮುಂದೆ ಬರಬೇಕಲ್ಲಾ.

ಅಧ್ಯಕ್ಷರು :— ಅರ್ಜಿ ಬಂದಿರುವವರಿಗೆ ಕೊಡಿ, ಕಮಿಟಿ ಬೇಗ ಮಾಡಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಒಂದೊಂದು ಕ್ಷೇತ್ರದಲ್ಲಿ ಕನಿಷ್ಟ 10-15 ಕೊಡಬೇಕೆಂದು ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆ. ತಾವು ಅರ್ಜಿಗಳನ್ನು ಕಳಿಸಿದರೆ ಕೊಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ :— ಇದುವರೆಗೆ ರಾಜ್ಯದಲ್ಲಿ ಸಮಿತಿಯನ್ನು ರಚನೆ ಮಾಡುವುದಕ್ಕೆ ಏನು ತೊಂದರೆ ಇದೆ? ತಾಲ್ಲೂಕು ಸಮಿತಿಗಳನ್ನು ರಚನೆ ಮಾಡಬೇಕಲ್ಲ. ಅರ್ಜಿ ತಂದು ಕೊಟ್ಟರೂ..

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಸಮಿತಿಗೋಸ್ಕರ ಕೆಲಸವನ್ನು ನಿಲ್ಲಿಸಿಲ್ಲ. ಅರ್ಜಿಗಳು ಬಂದಿರುವಾಗ ನೇರವಾಗಿ ಕೊಡುತ್ತಿದ್ದೇವೆ. ಸಮಿತಿ ಏಕೆ ಮಾಡುತ್ತಿದ್ದೇವೆಂದರೆ ಆ ವರ್ಗದ ಜನರಿಗೆ ಸರಿಯಾಗಿ ಐಡೆಂಟಿಫೈ ಮಾಡಿ ಕೊಡಲಿಕ್ಕೆ ಎರಡು ಜನ ಹಿಂದುಳಿದ ವರ್ಗದ ಮಹಿಳೆಯರ ನೇಮಕಾತಿ ಮಾಡಬೇಕು, ಎರಡು ಜನ ಅಲ್ಪಸಂಖ್ಯಾತರ ನೇಮಕಾತಿ ಮಾಡಬೇಕೆಂದು ಆದೇಶ ಕೊಡಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ :— ಎಲ್ಲಾ ಜಿಲ್ಲೆಯಲ್ಲಿ ಹಣ ಬಿಡುಗಡೆ ಆಗಿದೆಯಾ? ನಿಮ್ಮ ಟಾರ್ಗೆಟ್ ಇದ್ದಷ್ಟಕ್ಕೆ ಎಲ್ಲಾ ಜಿಲ್ಲೆಗೂ ಹಣ ಬಿಡುಗಡೆ ಮಾಡಿದ್ದೀರಾ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ರಾಜ್ಯದಲ್ಲಿ ಒಂದು ಕೋಟಿ ರೂಪಾಯಿ ಇಟ್ಟುಕೊಂಡಿದ್ದೇವೆ. ಯಾವ್ಯಾವ ಜಿಲ್ಲೆಯ ಅರ್ಜಿ ಬರುತ್ತದೆ, ಆ ಪ್ರಕಾರ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ :— ಆ ಅರ್ಜಿಗಳು ರಾಜ್ಯಕ್ಕೇ ಬರಬೇಕೇ?

ಶ್ರೀ ಮಾಲೀಕಯ್ಯ ವಿ ಗುತ್ತೇದಾರ್ :— ಜಿಲ್ಲಾಧಿಕಾರಿಗಳು ಮಾಹಿತಿ ಒದಗಿಸಿದ ಮೇಲೆ ನಾವು ಇಲ್ಲೇ ನಿರ್ದೇಶನಾಲಯದಲ್ಲಿ ಅದನ್ನು ಸ್ಕ್ರೂಟಿನಿ ಮಾಡಿ ಕಳುಹಿಸತಕ್ಕಂಥ ಒಂದು ಕಾರ್ಯಕ್ರಮ ಇದೆ.

ಶ್ರೀ ಆರಗ ಜ್ಞಾನೇಂದ್ರ :— ಮಾಂಗಲ್ಯ ಭಾಗ್ಯಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಶ್ಯಕತೆ ಇಲ್ಲವಾ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :—ಸಮಿತಿ ಬರುವವರೆಗೆ ಕೆಲಸ ನಿಲ್ಲಿಸುವುದಿಲ್ಲ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ.

ಹಾಸನದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ.

167(1245) ಶ್ರೀ ಹೆಚ್.ಕಿ. ಕುಮಾರಸ್ವಾಮಿ (ಬೇಲೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ನಗರದಲ್ಲಿ ಮೂರು ವರ್ಷಗಳ ಹಿಂದೆ ಅಂಬೇಡ್ಕರ್ ಭವನ ನಿರ್ಮಿಸಲು ಶಂಕುಸ್ಥಾಪನೆ ಮಾಡಿದ್ದು ನಿಜವೇ?